ಮೈಸೂರು ವಿಶ್ವವಿದ್ಯಾನಿಲಯ
# ಯುವರಾಜ ಕಾಲೇಜು
ವಿಶ್ವವಿದ್ಯಾನಿಲಯದ ಸಾಮರ್ಥ್ಯವರ್ಧಿತ ಉತ್ಕೃಷ್ಟಜ್ಞಾನ ಸ್ವಾಯತ್ತತಾ ಕಾಲೇಜು
ನ್ಯಾಕ್‌ನಿಂದ ಸಿಜಿಪಿಎ 3.34 'ಎ' ಗ್ರೇಡ್ ಮಾನ್ಯತೆ ದೊರೆತಿದೆ
ಜೆ.ಎಲ್.ಬಿ.ರಸ್ತೆ, ಮೈಸೂರು – ೫೭೦ ೦೦೫, ಕರ್ನಾಟಕ, ಭಾರತ

UNIVERSITY OF MYSORE
# YUVARAJA'S COLLEGE
(Constituent Autonomous College with Potential for Excellence)
Accredited 'A' grade with CGPA 3.34 by NAAC
JLB Road, Mysuru – 570 005, Karnataka, India

ಸಂಖ್ಯೆ: ಯು.ಕಾ./ಎಫ್.೩/೨೦೧೭-೧೮

ದಿನಾಂಕ:15-06-2017

## ಸುತ್ತೋಲೆ

ವಿಷಯ: ಕಾಲೇಜಿನ ಎಲ್ಲ ಅಧ್ಯಾಪಕ/ಅಧ್ಯಾಪಕೇತರರು/ಸಂಶೋಧಕರು/ವಿದ್ಯಾರ್ಥಿಗಳು "03ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ" ಯಲ್ಲಿ ತಪ್ಪದೇ ಭಾಗವಹಿಸುವ ಬಗ್ಗೆ.

ಉಲ್ಲೇಖ: ವಿಶ್ವವಿದ್ಯಾನಲಯದ ಸುತ್ತೋಲೆ ಸಂಖ್ಯೆ:ಜಿ.ಆರ್.5/195/2013-14, ದಿನಾಂಕ: 14-06-2016.

*****

ಮೈಸೂರು ನಗರವು ವಿಶ್ವದ ಯೋಗ ರಾಜಧಾನಿ ಎಂದು ಪ್ರಖ್ಯಾತವಾಗಿರುವ ಕಾರಣ ಜಿಲ್ಲಾಡಳಿತವು ದಿನಾಂಕ: **21-06-2017**ರ **ಬುಧವಾರದಂದು "03ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ 2017"** ಅತೀ ದೊಡ್ಡ ಮಟ್ಟದಲ್ಲಿ ಅಂದರೆ ಗಿನ್ನಿಸ್ ದಾಖಲೆಯ ಸೇರ್ಪಡೆಯಾಗುವ ರೀತಿ ಆಯೋಜಿಸಲು ತೀರ್ಮಾನಿಸಲಾಗಿದೆ.

ಈ ಹಿನ್ನಲೆಯಲ್ಲಿ ಉಲ್ಲೇಖಿತ ವಿ.ವಿ.ಸುತ್ತೋಲೆಯನ್ವಯ ನಮ್ಮ ಕಾಲೇಜಿನ ಎಲ್ಲಾ ಅಧ್ಯಾಪಕರು/ಅಧ್ಯಾಪಕೇತರರು/ಸಂಶೋಧಕರ ಹಾಗು ಎಲ್ಲಾ ಸೆಮಿಸ್ಟರ್‌ನ ವಿದ್ಯಾರ್ಥಿಗಳು ದಿನಾಂಕ: **18-06-2017ರ ಭಾನುವಾರದಂದು ಬೆಳಿಗ್ಗೆ 6.00 ಗಂಟೆಗೆ** ರೇಸ್‌ಕೋರ್ಸಿನ ಮೈದಾನದಲ್ಲಿ ಏರ್ಪಡಿಸಿರುವ ಪೂರ್ವಬಾವಿ ಯೋಗ ತರಬೇತಿ ಶಿಬಿರದಲ್ಲಿ ಹಾಗು ದಿನಾಂಕ: **21-06-2017ರ ಬುಧವಾರದಂದು ಬೆಳಿಗ್ಗೆ 6.00 ಗಂಟೆಗೆ** ರೇಸ್‌ಕೋರ್ಸಿನ ಮೈದಾನದಲ್ಲಿ ಅಂತಿಮ ಘಟ್ಟವಾಗಿ ಏರ್ಪಡಿಸಿರುವ **"03ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ 2017"**ರ ಕಾರ್ಯಕ್ರಮದಲ್ಲಿ ಕಡ್ಡಾಯವಾಗಿ ಭಾಗವಹಿಸಬೇಕೆಂದು ತಿಳಿಸಲಾಗಿದೆ.

ಮೇಲ್ಕಂಡ ಕಾರ್ಯಕ್ರಮದಲ್ಲಿ ಭಾಗವಹಿಸುವ ಪೂರ್ವಯೋಜಿತ ಸಮಯ **ಬೆಳಿಗ್ಗೆ 5.30ಕ್ಕೆ** ಎಲ್ಲರು ಮೈಸೂರು ಮೃಗಾಲಯದ ಮುಂಭಾಗದಲ್ಲಿರುವ ವಾಹನ ನಿಲುಗಡೆ ಮೈದಾನದಲ್ಲಿ ಸೇರತಕ್ಕದ್ದು.

ವಿಶ್ವವಿದ್ಯಾನಿಲಯವು ಯೋಗ ಶಿಬಿರದಲ್ಲಿ ಭಾಗವಹಿಸಿದ ಎಲ್ಲಾ ಅಭ್ಯರ್ಥಿಗಳ ಸಹಿಯನ್ನು ಪಡೆಯಲು ಸೂಚಿಸಿರುವುದರಿಂದ ನಿಗದಿತ ಸಮಯದಲ್ಲಿ ಮೇಲ್ಕಂಡ ಸ್ಥಳದಲ್ಲಿ ಹಾಜರಾಗಿ ಆ ದಿನದಂದು ನಾವು ನೀಡುವ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡಿ ನಂತರ ಪ್ರಾಂಶುಪಾಲರ ಮಾರ್ಗದರ್ಶನದಲ್ಲಿ ರೇಸ್‌ಕೋರ್ಸಿನ ಮೈದಾನವನ್ನು ಪ್ರವೇಶ ಮಾಡಬೇಕೆಂದು ತಿಳಿಸಲಾಗಿದೆ.

ಮೇಲ್ಕಂಡ ನಿಬಂಧನೆಗಳಿಗೆ ತಪ್ಪಿದಲ್ಲಿ ವಿಶ್ವವಿದ್ಯಾನಿಲಯ ತೆಗೆದುಕೊಳ್ಳುವ ಕಟ್ಟುನಿಟ್ಟಿನ ಕ್ರಮಗಳಿಗೆ ನೀವೆ ನೇರ ಹೊಣೆಗಾರರಾಗುತ್ತೀರೆಂದು ತಿಳಿಸಲಾಗಿದೆ.

**ಈ ವಿಷಯವನ್ನು ಅತಿ ಸೂಕ್ಷ್ಮ ಎಂದು ಪರಿಗಣಿಸತಕ್ಕದ್ದು.**

R Ganesh 15/6/17

ಪ್ರಾಂಶುಪಾಲರು

ಇವರಿಗೆ:

೧. ಎಲ್ಲಾ ವಿಭಾಗದ ಮುಖ್ಯಸ್ಥರುಗಳಿಗೆ,, ಯುವರಾಜ ಕಾಲೇಜು, ಮೈಸೂರು – ತಮ್ಮ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅಧ್ಯಾಪಕರು/ಅಧ್ಯಾಪಕೇತರರು/ಸಂಶೋಧಕರು ಹಾಗು ಎಲ್ಲಾ ಸೆಮಿಸ್ಟರ್‌ನ ವಿದ್ಯಾರ್ಥಿಗಳ ಗಮನಕ್ಕೆ ಈ ವಿಷಯವನ್ನು ತಂದು ಸುತ್ತೋಲೆಯಲ್ಲಿ ಸಹಿಮಾಡಿಸಿಕೊಳ್ಳತಕ್ಕದ್ದು. ಸಹಿ ಮಾಡಿದ ಸುತ್ತೋಲೆಯ ಪ್ರತಿಯನ್ನು ಈ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ.
೨. ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
೩. ಕುಲಪತಿಗಳು/ಕುಲಸಚಿವರ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
೪. ಆಡಳಿತಾಧಿಕಾರಿಗಳು, ಆಡಳಿತಾಧಿಕಾರಿಗಳ ಕಛೇರಿ, ಮಾನಸಗಂಗೋತ್ರಿ, ಮೈಸೂರು.
೫. ಆಡಳಿತಾಧಿಕಾರಿಗಳು, ಯುವರಾಜ ಕಾಲೇಜು, ಮೈಸೂರು.
೬. ಅಧೀಕ್ಷಕರು, ಯುವರಾಜ ಕಾಲೇಜು, ಮೈಸೂರು.
೭. ಕಛೇರಿ ಪ್ರತಿ.